ಸಂದರ್ಭ ಸಿಕ್ಕಾಗಲೆಲ್ಲ ನಾನವಳಲ್ಲಿ ಮಾತನಾಡಿದೆ. ಹಲವನ್ನೂ. ಮೊದಮೊದಲಿಗೆ ನನ್ನೊಡನೆ ಮಾತನಾಡುವಾಗ ಇದ್ದ ಹೆದರಿಕೆ ಕ್ರಮೇಣ ಇಲ್ಲವಾಯಿತು.

ಒಂದು ಹೊಸ ಮಿಕವನ್ನು ಕಂಡುಕೊಂಡ ಸಂತೃಪ್ತಿಯೊಡನೆ 'ಶಿಕಾರಿ' ಮುಂದುವರಿಸಿದೆ.

ಸಂಜೆ ಹೊತ್ತಿಗೆ ಹೊರಗಿಳಿದು ನಡೆಯುವುದು ನನ್ನ ಅಭ್ಯಾಸವಾಗಿತ್ತು. ಲಕ್ಷ್ಮಿ ಬಂದ ಬಳಿಕ ನನ್ನ ದಿನಚರಿಯಲ್ಲಿ ಕೆಲವೊಂದು ಬದಲಾವಣೆಗಳಾದವು. ಉದಾಸೀನದಿಂದ ಸಿನಿಮಾ ಮಾಸಿಕಗಳನ್ನು ತಿರುವಿ ಹಾಕಿ, ಸಂಜೆ ಪೂರ್ತಿ ಕೋಣೆಯ ಒಳಗಡೆಯೇ ಕಳೆಯಲಾರಂಭಿಸಿದೆ. ಆ ಹೊತ್ತಿಗೆ ಲಕ್ಷ್ಮಿ ಮೇಲಿನ ಕೋಣೆಗಳನ್ನು ಗುಡಿಸಿ ಒರೆಸಲು ಬರುತ್ತಿದ್ದುದು.

ಅವಳ ಪ್ರತಿಯೊಂದು ಚಲನವಲನಗಳನ್ನು ಗಮನಿಸುತ್ತಲೇ ನಾನು ಹಗಲು ಕಳೆಯುತ್ತಿದ್ದೆ. ಭಾವನೆಗಳ ಹಸಿವಿನಿಂದ ಹಾಸಿಗೆಯಲ್ಲಿ ಹೋಗಿ ಬಿದ್ದುಕೊಳ್ಳುತ್ತಿದ್ದೆ... ಪ್ರತಿಯೊಂದು ದಿವಸವೂ ನಾನು ನಿರ್ಧರಿಸುತ್ತಿದ್ದೆ. ನಾಳೆಯಾಗಲಿ... ನಾಳೆ!

ಒಂದು ಸಂಜೆ ಅವಳು ಮೇಲೆ ಬಂದಳು. ನಾನು ಕೋಣೆಯ ಒಳಗೆ ಸಿಗರೇಟಿನ ಹೊಗೆ ಸುರುಳಿಗಳಿಂದ ಕನಸುಗಳಿಗೆ ಬಣ್ಣ ಹಚ್ಚುತ್ತ ಕುಳಿತ್ತಿದ್ದೆ.

ಮೇಲೆ ಮೂರು ಕೋಣೆಗಳಿವೆ. ಮೆಟ್ಟಿಲುಗಳನ್ನು ಏರಿ ಬಂದರೆ ಮೊದಲ ಕೋಣೆಯೇ ನನ್ನದು. ಅನಂತರದ್ದು ನನ್ನ ತಂಗಿಯದು. ಮೂರನೆಯ ಕೋಣೆಯನ್ನು ಬೀಗ ಹಾಕಿಡಲಾಗಿದೆ. ಅಮ್ಮ ತೀರಿಕೊಂಡ ಅನಂತರ ಆ ಕೋಣೆಯನ್ನು ಉಪಯೋಗಿಸುವುದಿಲ್ಲ. ಅಪ್ಪ ಕುಳಿತುಕೊಳ್ಳುವುದು ಮಲಗುವುದು ಎಲ್ಲ ಕೆಳಗೆ.

